ಅಸಲು ದಾವೆ ನಂಃ 336/2021 ಪಿ.ಡಬ್ಲ್ಯೂಃ1–ವೀರಣ್ಣ ಸಿದ್ದಪ್ಪ ಮೂಲಿಮನಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 06/08/2025 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ LNB ವಕೀಲರಿಂದಃ**

1. ನನ್ನ ತಂದೆಯವರು ವಯೋಸಹಜ ಖಾಯಿಲೆ ಯಿಂದ 2011 ರಲ್ಲಿ ನಿಧನರಾಗಿರುತ್ತಾರೆ. ನನ್ನ ತಂದೆಯವರು ನಿಧನರಾದ ನಂತರ ದಾವಾ ಆಸ್ತಿಯ ದಾಖಲೆಗಳನ್ನು ನಾನು ನೋಡಿರುತ್ತೇನೆ. 2011 ರಲ್ಲಿ ದಾವಾ ಆಸ್ತಿಯ ದಾಖಲಾತಿಗಳು ಪ್ರತಿವಾದಿಗಳ ಹೆಸರಿನಲ್ಲಿ ಇತ್ತು. 2020 ರಲ್ಲಿ ಪ್ರತಿವಾದಿಗಳು ತಮ್ಮ ತಮ್ಮಲ್ಲಿ ದಾವಾ ಆಸ್ತಿಯಲ್ಲಿ ಭಾಗವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಿ ಟಿ ಎಸ್ ಸಂಖ್ಯೆ 40+41/6 ಬಿ/6 ಎ ಆಸ್ತಿಯು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಮತ್ತು ದಾವಾ ಆಸ್ತಿಯ ಸಿ ಟಿ ಎಸ್ ಸಂಖ್ಯೆ 40+41/6 ಬಿ/6 ಬಿ ಆಸ್ತಿಯು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ದಾಖಲಾತಿಗಳನ್ನು ನೋಡಿರುತ್ತೇನೆ. ಆಗ ದಾವಾ ಆಸ್ತಿಯ ದಾಖಲಾತಿಗಳು ಪ್ರತಿವಾದಿಯವರ ಹೆಸರಿನಲ್ಲಿ ಇರುವುದು ಕಂಡು ಬಂದಿರುತ್ತದೆ. 1 ನೇ ಪ್ರತಿವಾದಿಯವರು ತನಗೆ ಬಂದಂತಹ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯವರು ತನಗೆ ಬಂದ ಹಿಸ್ಸಾವನ್ನು ಕನ್ಯಾಕುಮಾರಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ವಾಸವಾಗಿರುವ ಮನೆಯ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಆಸ್ತಿಯ ಸಿ ಟಿ ಎಸ್ ಸಂಖ್ಯೆ 40+41/6 ಬಿ ರ ಒಂದು ಭಾಗ ಆಸ್ತಿಯಲ್ಲಿ ನಾನು ವಾಸವಾಗಿರುತ್ತೇನೆಂದರೆ ಸರಿ. ದಾವಾ ಆಸ್ತಿಗಳಿಗೆ 1 ಮತ್ತು 2 ನೇ ಪ್ರತಿವಾದಿಗಳು ಮಾಲೀಕರಾಗಿರುತ್ತಾರೆ, ಹಾಗಾಗೀ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 30/03/2001 ರಂದು ನನ್ನ ತಂದೆಯವರು ಪ್ರತಿವಾದಿಯವರ ತಂದೆಯಪಾಲಿನ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಪ್ರತಿವಾದಿಯವರ ತಂದೆಗೆ ಆಸ್ತಿಯನ್ನು ಬಿಟ್ಟು ಕೊಟ್ಟ ದಿನಾಂಕದಿಂದ ಪ್ರತಿವಾದಿಯವರೇ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಯವರು ದಾವಾ ಆಸ್ತಿಯನ್ನು ಪ್ರತಿವಾದಿಗಳಿಗೆ ಬಿಟ್ಟು ಕೊಟ್ಟ ನಂತರ 2011 ರವರೆಗೆ ನಾವು ಯಾವುದೇ ರೀತಿಯಿಂದ ಪ್ರತಿವಾದಿಗಳಿಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಆಸ್ತಿಯಲ್ಲಿ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ತಂದೆಯವರು ಪ್ರತಿವಾದಿಗಳಿಗೆ ಆಸ್ತಿಯನ್ನು ಬಿಟ್ಟು ಕೊಟ್ಟಿರುವ ವಿಷಯ 2001 ರಲ್ಲಿಯೇ ನನಗೆ ತಿಳಿದಿದ್ದರೂ ಸಹ ನನ್ನ ತಂದೆಯವರು ನಿಧನರಾದ ನಂತರ ನನಗೆ ತಿಳಿದುಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.ಪ್ರತಿವಾದಿಗಳಿಗೆ

ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.